## ಒಂದು ಟೂರ್ನಿ; ನಾಲ್ಕು ಹಣ್ಣು!

‘ಫಿಡೆ ವಿಶ್ವಕಪ್ ಚೆಸ್ 2023’ ನಾಲ್ಕು ಕಾರಣಗಳಿಂದ ಭಾರತದ ಚದುರಂಗ ಪ್ರಿಯರಿಗೆ ಸ್ಮರಣೀಯ. ಒಂದು, ವಿಶ್ವನಾಥನ್ ಆನಂದ್‌ರನ್ನು ಹಿಂದಿಕ್ಕಿದ ಡಿ. ಗುಕೇಶ್ ಭಾರತದ ಈ ಹೊತ್ತಿನ ಅಗ್ರಮಾನ್ಯ ಚೆಸ್ ಪಟು ಎನ್ನುವ ಸಾಧನೆಗೆ ಈ ಟೂರ್ನಿ ವೇದಿಕೆಯಾಯಿತು.

ಎರಡು, ಭಾರತದ ನಾಲ್ವರು ಆಟಗಾರರು ಅಂತಿಮ ಎಂಟರ ಘಟ್ಟ ಮುಟ್ಟಿದ್ದು ಹಾಗೂ ಒಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತೀಯರ ನಡುವೆಯೇ ಪೋಟಿ ಎದುರಾದುದು (ಪ್ರಜ್ಞಾನಂದ ಮತ್ತು ಅರ್ಜುನ್ ಎರಿಗೇಶಿ ಸ್ಪರ್ಧೆ). ಮೂರನೆಯದು, ಪ್ರಜ್ಞಾನಂದರ ಅದ್ಭುತ ಸಾಧನೆ. ನಾಲ್ಕನೆಯದು, ಮುಂದಿನ ವರ್ಷದ ಕ್ಯಾಂಡಿಡೇಟ್ಸ್ ಟೂರ್ನಿಗೆ ಪ್ರಜ್ಞಾನಂದ ಆಯ್ಕೆಯಾಗುವುದರೊಂದಿಗೆ ವಿಶ್ವ ಚಾಂಪಿಯನ್ ಸ್ಪರ್ಧಿಗೆ ಸವಾಲು ಎಸೆಯುವವರ ಸರತಿಯಲ್ಲಿ ನಿಲ್ಲುವಂತಾದುದು.



2022ರಲ್ಲಿ ನಡೆದ 44ನೇ ವಿಶ್ವ ಚೆಸ್ ಒಲಿಂಪಿಯಾಡ್ ಸಂದರ್ಭದಲ್ಲಿ ಚೆನ್ನೈನ ಮರೀನಾ ಬೀಚ್‌ನಲ್ಲಿ ಕಾಣಿಸಿದ ಚೆಸ್ ಸಂಭ್ರಮ.

**ಐದು ವರ್ಷದವನಿದ್ದಾಗ ಚದುರಂಗದ ಹಾಸಿನೆದುರು ಕೂತ ಪ್ರಜ್ಞಾನಂದ, 2013ರಲ್ಲಿ 8 ವರ್ಷದೊಳಗಿನವರ ವಿಶ್ವ ಯುವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಎನ್ನಿಸಿಕೊಂಡಿದ್ದ. ಆ ಮೂಲಕ ‘ಫಿಡೆ ಮಾಸ್ಟರ್’ ಗೌರವ ಎಳನೇ ವಯಸ್ಸಿಗೇ ದೊರೆತಿತ್ತು. 2015ರಲ್ಲಿ 10 ವರ್ಷದೊಳಗಿನ ಚಾಂಪಿಯನ್ ಪಟ್ಟವೂ ಪ್ರಗ್ಗುವಿನ ಪಾಲಾಗಿತ್ತು.**

### ಚೆಸ್‌ನ ಹೊಸ ಸಂಚಲನ

ಭಾರತೀಯ ಚೆಸ್ ಮಾತ್ರವಲ್ಲ, ವಿಶ್ವ ಚೆಸ್‌ನಲ್ಲೂ ಆರ್. ಪ್ರಜ್ಞಾನಂದ ಹೊಸ ಸಂಚಲನ. ಎಣ್ಣೆಗೆಂಪು ಬಣ್ಣ, ಎಣ್ಣೆಯೊತ್ತಿ ಮುಂದಕ್ಕೆ ಬಾಚಿದ ತಲೆಗೂದಲು, ಹಣೆಯನ್ನು ಅಲಂಕರಿಸಿರುವ ಭಂಡಾರ, ಅಪಾರ ಆತ್ಮವಿಶ್ವಾಸವನ್ನು ಸೂಸುವ ಜೀವಕೊಳಗಳಂತಹ ಕಣ್ಣುಗಳು, ತುಟಿಗಳ ಮೇಲಿನ್ನೂ ಸ್ಪಷ್ಟವಾಗಿ ಮೂಡದ ಮೀಸೆಗಪ್ಪು – ನಾಚಿಕೆಮುಳ್ಳಿನಂತಹ ಹದಿನೆಂಟರ ಈ ಹುಡುಗ ಚದುರಂಗದ ಹಾಸಿನೆದುರು ಕೂತರೆ ಪ್ರಚಂಡ. ಅನೂಹ್ಯ ನಡೆಗಳಿಗೆ ಹಾಗೂ ದಾಳಿಕೋರತನಕ್ಕೆ ಹೆಸರಾದ ಕಾರ್ಲ್‌ಸನ್, ‘ಏರ್ ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ್‍ಯಾಪಿಡ್ ಟೂರ್ನಿ’ಯಲ್ಲಿ ಕೇವಲ ಹತ್ತೊಂಬತ್ತೇ ನಡೆಗಳಲ್ಲಿ ಪ್ರಜ್ಞಾನಂದ ವಿರುದ್ಧ ಮಣಿದಾಗ ಚೆಸ್ ಜಗತ್ತು ನಿಬ್ಬೆರಗಾಗಿತ್ತು. ಆ ಗೆಲುವು ಅನಿರೀಕ್ಷಿತವಲ್ಲ ಎನ್ನುವುದನ್ನು ಫಿಡೆ ವಿಶ್ವಕಪ್ ಟೂರ್ನಿಯಲ್ಲಿನ ಪ್ರಜ್ಞಾನಂದನ ಸಾಧನೆ ರುಜುವಾತುಪಡಿಸಿದೆ.

ಹತ್ತನೇ ವಯಸ್ಸಿನಲ್ಲೇ ‘ಇಂಟರ್‌ನ್ಯಾಷನಲ್ ಮಾಸ್ಟರ್’ ಪಟ್ಟಕ್ಕೇರಿದ್ದ ಪ್ರಜ್ಞಾನಂದ, 2018ರಲ್ಲಿ ಗ್ರ್ಯಾಂಡ್ ಮಾಸ್ಟರ್ ಪಟ್ಟಕ್ಕೇರಿದ್ದ; ಆ ಮೂಲಕ ವಿಶ್ವದ ಎರಡನೇ ಅತಿ ಕಿರಿಯ ಗ್ರ್ಯಾಂಡ್ ಮಾಸ್ಟರ್ ಎನ್ನಿಸಿಕೊಂಡಿದ್ದ. ತನ್ನ ವಯಸ್ಸಿನ ಜಾಣ ಜಾಣೆಯರೆಲ್ಲ ಮೊಬೈಲ್ ಸಂಗದಲ್ಲಿ ಬೆರಳು ಸವೆಸುತ್ತಿರುವಾಗ ಇಲ್ಲವೇ ಎಂಜಿನಿಯರಿಂಗ್–ಮೆಡಿಕಲ್ ಕಲಿಕೆಯ ಹಂಬಲದಲ್ಲಿ ಮುಳುಗಿರುವಾಗ, ಪ್ರಜ್ಞಾನಂದ ಚದುರಂಗದ ಚೌಕಗಳನ್ನೇ ತನ್ನ ಯಶಸ್ಸಿನ ಏಣಿಗಳನ್ನಾಗಿಸಿಕೊಂಡಿರುವುದು ಕುತೂಹಲಕರ. ‘ಎಂಟನೇ ವಯಸ್ಸಿನಲ್ಲಿದ್ದಾಗಲೇ ಚದುರಂಗದ ಹಾಸೇ ತನ್ನ ಭವಿಷ್ಯ ಎನ್ನುವುದರ ಅರಿವು ತಮ್ಮ ಶಿಷ್ಯನಿಗಿತ್ತು’ ಎನ್ನುತ್ತಾರೆ, ಪ್ರಗ್ ಏಳು ವರ್ಷದವನಿದ್ದಾಗಿನಿಂದ ತರಬೇತಿ ನೀಡುತ್ತಿರುವ ಆರ್.ಬಿ. ರಮೇಶ್. ಚೆಸ್ ಮಾತ್ರವಲ್ಲ – ಟೆನ್ನಿಸ್ ಎಂದರೂ ಪ್ರಗ್‌ಗೆ ಇಷ್ಟ. ಕ್ರಿಕೆಟ್ ಬಗ್ಗೆಯೂ ಸೆಳೆತವಿದೆ. ಚೆನ್ನೈನಲ್ಲಿ ಗೆಳೆಯರೊಂದಿಗೆ ಸೇರಿ ಕ್ರಿಕೆಟ್ ಆಡುವುದಿದೆ. ಟೀವಿಯಲ್ಲಿ ತಮಿಳು ಕಾಮಿಡಿಗಳನ್ನು ನೋಡುವುದೆಂದರೆ ತುಂಬಾ ಇಷ್ಟ. ‘ವಿಶಿ’ಯೆಂದರೆ ಪ್ರಗ್‌ಗೆ ಮೆಚ್ಚುಗೆ–ಆದರ್ಶವಷ್ಟೇ ಅಲ್ಲ, ತಾನು ಏರಬೇಕಾದ ಎತ್ತರದ ಅಳತೆಗೋಲೂ ಹೌದು.

